





# ಕಾಡು ಬೆಳೆ
# ಕೆಂಬಲ್ ಕಾಯಿ

ಚಿತ್ರ– ಬರಹ: **ಚಂದ್ರಹಾಸ ಚಾರ್ಮಾಡಿ**

**ನೋ**ಡಲು ಕಪ್ಪು ದ್ರಾಕ್ಷಿಯಂತೆ ಕಾಣುವ ಕೆಂಬಲ್‌ಕಾಯಿ ಗೊಂಚಲು ಗೊಂಚಲಾಗಿ ಬೆಳೆಯುತ್ತದೆ. ಕಾಡಿನಲ್ಲಿ ಹೆಚ್ಚಾಗಿ ಕಾಣಸಿಗುವ ಕೆಂಬಲ್‌ಕಾಯಿ ಉಪ್ಪಿನಕಾಯಿಯಲ್ಲಿ ಉಪಯೋಗಿಸುವ ಒಂದು ಅಪ್ಪಟ ಕಾಡು ಹಣ್ಣು. ನೆಲದ ಮೇಲೆ ಗೊಂಚಲಾಗಿ ಬಿದ್ದುಕೊಂಡಿರುವ ಕೆಂಬಲ್ ಮಳೆಗಾಲದ ಆರಂಭದಲ್ಲಿ ಅಂದರೆ ಮೇ, ಜೂನ್, ಜುಲೈ ತಿಂಗಳಲ್ಲಿ ಮಾತ್ರ ಕಾಡಿನಲ್ಲಿ ಕಾಣಸಿಗುತ್ತದೆ.

ಒಂದು ಬಳ್ಳಿಯಲ್ಲಿ 10ರಿಂದ 15 ಗೊಂಚಲುಗಳಿರುತ್ತವೆ. ಸಾಮಾನ್ಯವಾಗಿ ಒಂದು ಗೊಂಚಲಿನಲ್ಲಿ ನೂರರಿಂದ ನೂರವೈತ್ತು ಕಾಯಿಗಳಿರುತ್ತವೆ. ಉಪ್ಪಿನಕಾಯಿ ತಯಾರಿಕೆಯಲ್ಲಿ ಉಪಯೋಗಿಸಲ್ಪಡುವ ಕೆಂಬಲ್ ಏಳರಿಂದ ಎಂಟು ವರ್ಷಗಳವರೆಗೆ ಹಾಳಾಗುವುದಿಲ್ಲ.

ಕಾಯಿಯ ಒಳಗೆ 2–3 ಬೀಜಗಳಿದ್ದು ಆಯುರ್ವೇದದ ಔಷಧಿ ತಯಾರಿಕೆಯಲ್ಲೂ ಇದನ್ನು ಬಳಸುತ್ತಾರೆ. ಹಣ್ಣಿನ ರಸ ಮೈಗೆ ತಾಗಿದರೆ ಸ್ವಲ್ಪ ತುರಿಸುತ್ತದೆ. ಈ ಅಪರೂಪದ ಕಾಡಬಳ್ಳಿಯನ್ನು ತೋಟಗಳಲ್ಲೂ ಬೆಳೆಯಬಹುದು. ಕೆಂಬಲ್‌ಕಾಯಿಯ ಉಪ್ಪಿನಕಾಯಿಗೆ ಇಂದಿಗೂ ಮಾರುಕಟ್ಟೆಯಲ್ಲಿ ಬಹು ಬೇಡಿಕೆಯಿದ್ದು ಇದನ್ನು ತೋಟಗಳಲ್ಲಿ ಬೆಳೆಸಿ ಹಣ ಸಂಪಾದನೆ ಹೆಚ್ಚಿಸಬಹುದು. ಜನರಿಗೆ ಸರಿಯಾದ ಮಾಹಿತಿಯಿಲ್ಲದೆ ಕಾಡಿನಲ್ಲಿ ಈ ಹಣ್ಣು ಎಷ್ಟೋ ಕಡೆ ಹಾಳಾಗುತ್ತಿದೆ.